**ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ, ನ್ಯಾಯಾಲಯ, ಕುಂದಗೋಳ**

**ಸಿ.ಸಿ. ನಂ. 2111/2025 ಸಿ. ಡಬ್ಲ್ಯೂಃ 14 ಪಿ ಡಬ್ಲ್ಯೂ ಃ 8**

ಸಾಕ್ಷಿಯ ಹೆಸರು ಃ ಶಿವಾನಂದ ಅಂಬಿಗೇರ

ತಂದೆಯ ಹೆಸರು ಃ ನಾಗಪ್ಪ

ವಯಸ್ಸು ಃ 52 ವರ್ಷ

ಉದ್ಯೋಗ ಃ ಸಿ ಪಿ ಐ, ದಾಂಡೇಲಿ.

ವಾಸಸ್ಥಳ ಃ ದಾಂಡೇಲಿ.

ದಿನಾಂಕಃ 29/08/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ**

1. ದಿಃ 05-08-2023 ರಿಂದ 06-11-2025 ರ ವರೆಗೆ ಕುಂದಗೋಳ ಪೋಲೀಸ್ ಠಾಣೆಯಲ್ಲಿ ಸಿ ಪಿ ಐ ಆಗಿ ಕೆಲಸ ಮಾಡಿದ್ದೇನೆ. ದಿಃ 25/06/2025 ರಂದು ರಾತ್ರಿ 07-45 ಗಂಟೆಗೆ ಚಾಸಾ 1 ಅವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ನಂಬರ 88/2025 ರಂತೆ ಪ್ರಕರಣ ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿಃ 26-06-2025 ರಂದು ಮೃತನ ಶವ ಪಂಚನಾಮೆಯನ್ನು ಹುಬ್ಬಳ್ಳಿಯ ಕೆ ಎಮ್ ಸಿ ಆಸ್ಪತ್ರೆಯಲ್ಲಿ ಚಾಸಾ 2 ಮತ್ತು 3 ರ ಸಮಕ್ಷಮ ಬೆಳಿಗ್ಗೆ 08-15 ರಿಂದ 09-15 ರ ವರೆಗೆ ಮಾಡಿರುತ್ತೇನೆ. ಆ ಸಮಯದಲ್ಲಿ ಭಾವ ಚಿತ್ರ ತೆಗೆದಿರುತ್ತೇನೆ. ಅದೇ ದಿನ ಶವವನ್ನು ಮರಣೋತ್ತರ ಪರೀಕ್ಷೆಯ ನಂತರ ಚಾಸಾ 1 ಅವರಿಗೆ ಹಸ್ತಾಂತರಿಸಿರುತ್ತೇನೆ. ಅದೇ ದಿನ ಅಪಘಾತ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ 1 ಅವರು ತೋರಿಸಿದ ಸ್ಥಳದಲ್ಲಿ ಚಾಸಾ 2 ಮತ್ತು 3 ರ ಸಮಕ್ಷಮ ಸ್ಥಳ ಪಂಚನಾಮೆ ಬೆಳಿಗ್ಗೆ 11-30 ರಿಂದ 12-15 ರ ವರೆಗೆ ಮಾಡಿ ಸ್ಥಳದಲ್ಲಿದ್ದ ಎರಡು ವಾಹನಳಾದ ಬುಲೋರೊ ವಾಹನ ಸಂಖ್ಯೆ ಕೆಎ-25-ಡಿ-7212 ಮತ್ತು ಮೋಟಾರ್ ಸೈಕಲ ನಂಬರ ಕೆಎ-26-ವಿ-7184 ನ್ನು ಜಪ್ತಿ ಪಡಿಸಿಕೊಂಡು ಸ್ಥಳದ ಕಚ್ಚಾ ನಕಾಶೆ ತಯಾರಿಸಿ ಭಾವ ಚಿತ್ರ ತೆಗೆದಿರುತ್ತೇನೆ. ದಿಃ 26-08-2025 ರಂದು ಚಾಸಾ 8 ಅವರಿಂದ ಕಲಂ 63(4) ರಡಿ ಪ್ರಮಾಣ ಪತ್ರ ಪಡೆದಿರುತ್ತೇನೆ. ದಿಃ 27-06-2025 ರಂದು 2 ನೇ ಆರೋಪಿಗೆ ಬುಲೋರೋ ವಾಹನದ ದಾಖಲೆಗಳನ್ನು ಹಾಜರು ಪಡಿಸುವಂತೆ ಕಲಂ 133 ಎಮ್ ವಿ ಕಾಯ್ದೆ ಅಡಿ ನೋಟೀಸ ನೀಡಿರುತ್ತೇನೆ. ನಂತರ ಚಾಸಾ 9 ಅವರಿಗೆ ವಾಹನ ಪರೀಶೀಲನೆ ಮಾಡಿ ವರದಿ ನೀಡುವಂತೆ ಪತ್ರ ಬರೆದಿರುತ್ತೇನೆ. ನಂತರ ದಿಃ 28-06-2025 ರಂದು ಚಾಸಾ 1 ಅವರಿಗೆ ವಾಹನದ ದಾಖಲೆಗಳನ್ನು ಹಾಜರು ಪಡಿಸುವಂತೆ ಕಲಂ 133 ಎಮ್ ವಿ ಕಾಯ್ದೆ ಅಡಿ

ನೋಟೀಸ ನೀಡಿರುತ್ತೇನೆ. ಅದೇ ದಿನ ಚಾಸಾ 5 ಮತ್ತು 6 ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 01-07-2025 ರಂದು ಚಾಸಾ 12 ಅವರಿಂದ ಮೃತನ ಪಿ ಎಮ್ ವರದಿ ಹಾಗೂ ರಕ್ತದ ಮಾದರಿಯನ್ನು ಪಡೆದಿರುತ್ತೇನೆ. ನಂತರ 1 ನೇ ಆರೋಪಿ ಠಾಣೆಗೆ ಹಾಜರಾಗಿದ್ದು ದಾಖಲೆಗಳನ್ನು ಪರೀಶೀಲಿಸಿ ಕೃತ್ಯದ ಬಗ್ಗೆ ವಿಚಾರಿಸಿದ್ದು, ಆತ ಒಪ್ಪಿಕೊಂಡ ಕಾರಣ ದಸ್ತಗಿರಿ ಕ್ರಮ ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಟ್ಟಿರುತ್ತೇನೆ. ಅದೇ ದಿನ ವಾಹನ ತಾಂತ್ರಿಕ ಪರೀಕ್ಷೆ ಆದ ಕಾರಣ 2 ನೇ ಆರೋಪಿಯಿಂದ ಇಂಡೇಮನಿಟಿ ಬಾಂಡ ಪಡೆದು ವಾಹನವನ್ನು ಅವರ ವಶಕ್ಕೆ ನೀಡಿರುತ್ತೇನೆ. ದಿಃ 02-7-2025 ರಂದು ಚಾಸಾ 9 ಅವರಿಂದ ಐ ಎಮ್ ವಿ ವರದಿಯನ್ನು ಪಡೆದಿರುತ್ತೇನೆ. ದಿಃ 03-07-2025 ರಂದು ಮೃತನ ರಕ್ತದ ಮಾದರಿದಯನ್ನು ಚಾಸಾ 13 ಅವರಿಗೆ ಚಾಸಾ 7 ರ ಮೂಲಕ ಪರೀಶೀಲನೆಗೆ ಕಳುಹಿಸಿರುತ್ತೇನೆ. ದಿಃ 30-07-2025 ರಂದು ಚಾಸಾ 4 ರ ಹೇಳಿಕೆ ಪಡೆದಿರುತ್ತೇನೆ. ದಿಃ 03-08-2025 ರಂದು ಮೃತನ ವಾಹನದ ದಾಖಲೆಗಳನ್ನು ಪರೀಶೀಲಿಸಿ ಅದರ ವಾರಸುದಾರರಿಗೆ ಇಂಡೇಮನಿಟಿ ಬಾಂಡ ಪಡೆದು ಮೋಟಾರ್ ಸೈಕಲನ್ನು ಅವರ ಮಧ್ಯಂತರ ವಶಕ್ಕೆ ಕೊಟ್ಟಿರುತ್ತೇನೆ. ದಿಃ 05-08-2025 ರಂದು ಚಾಸಾ 13 ಅವರಿಂದ ಮೃತನ ರಕ್ತದ ಮಾದರಿಯ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 06-08-2025 ರಂದು ಪಿ ಡಬ್ಲೂ ಡಿ ಮತ್ತು ಆರ್ ಟಿ ಓ ಅವರಿ ಅವರಿಂದ ಜಂಟಿ ಸ್ಥಳ ತನಿಖೆಯನ್ನು ಮಾಡಿ ವರದಿಯನ್ನು ಪಡೆದಿರುತ್ತೇನೆ. ದಿಃ 12-08-2025 ರಂದು ಚಾಸಾ 12 ಅವರಲ್ಲಿ ರಕ್ತದ ಮಾದರಿಯನ್ನು ಕಳುಹಿಸಿ ಅಂತಿಮ ಅಭಿಪ್ರಾಯವನ್ನು ಕೇಳಿರುತ್ತೇನೆ. ದಿಃ 22-08-2025 ರಂದು ಚಾಸಾ 12 ಅವರಿಂದ ಮೃತನ ರಕ್ತದ ಅಂತಿಮ ವರದಿಯನ್ನು ಪಡೆದುಕೊಂಡು ಅದೇ ದಿನ ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿತರು ನ್ಯಾಯಾಲಯದಲ್ಲಿ ಹಾಜರಿದ್ದು, ಅವರನ್ನು ನೋಡಿ ಗುರುತಿಸುತ್ತೇನೆ.

2. ದೂರನ್ನು ಈಗಾಗಲೇ ನಿಪಿ. 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 1 ಬಿ ಎಂದು ಗುರುತಿಸಲಾಯಿತು. ಶವ ಪಂಚನಾಮೆಯನ್ನು ಈಗಾಗಲೇ ನಿಪಿ. 5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 5 ಸಿ ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲಕ್ಕೆ ತೆಗೆದ ಭಾವ ಚಿತ್ರವನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಲಾಗಿದೆ. ಕೃತ್ಯ ಸ್ಥಳದ ಪಂಚನಾಮೆ ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ. 3 ಡಿ ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ಭಾವ ಚಿತ್ರ ಈಗಾಗಲೇ ನಿಪಿ. 4 ಎಂದು ಗುರುತಿಸಲಾಗಿದೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ. 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 10 ಎ ಎಂದು ಗುರುತಿಸಲಾಯಿತು. ಪಿ ಎಮ್ ವರದಿಯನ್ನು

ಈಗಾಗಲೇ ನಿಪಿ. 8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 8 ಎ ಎಂದು ಗುರುತಿಸಲಾಯಿತು. ಐ ಎಮ್ ವಿ ವರದಿಯನ್ನು ಈಗಾಗಲೇ ನಿಪಿ. 9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 9 ಬಿ ಎಂದು ಗುರುತಿಸಲಾಯಿತು. ಕಲಂ 133 ರ ನೋಟೀಸನ್ನು ನಿಪಿ. 11 ಮತ್ತು 12 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 11 ಎ ಮತ್ತು 12 ಎ ಎಂದು ಗುರುತಿಸಲಾಯಿತು. ಕಲಂ 63(4) ರ ಪ್ರಮಾಣ ಪತ್ರವನ್ನು ನಿಪಿ. 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 13 ಎ ಎಂದು ಗುರುತಿಸಲಾಯಿತು. ಇಂಡೇಮನಿಟಿ ಬಾಂಡಗಳನ್ನು ನಿಪಿ. 14 ಮತ್ತು 15 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 14 ಎ ಮತ್ತು 15 ಎ ಎಂದು ಗುರುತಿಸಲಾಯಿತು. ಬುಲೋರೋ ವಾಹನದ ಐದು ಹಾಗೂ ಮೋಟಾರ ಸೈಕಲನ ಐದು ಚಿತ್ರಗಳನ್ನು ಒಟ್ಟಾಗಿ ನಿಪಿ. 16 ಮತ್ತು 17 ಎಂದು, ಜಂಟಿ ತನಿಖಾ ವರದಿಯನ್ನು ನಿಪಿ. 18 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 18 ಎ ಎಂದು ಗುರುತಿಸಲಾಯಿತು. ಭಾವ ಚಿತ್ರವನ್ನು ನಿಪಿ. 19 ಎಂದು ಗುರುತಿಸಲಾಯಿತು. ಚಾಸಾ 12 ಅವರು ನೀಡಿದ ಮೃತನ ರಕ್ತ ಮಾದರಿ ವರದಿಯನ್ನು ನಿಪಿ. 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 20 ಎ ಎಂದು ಗುರುತಿಸಲಾಯಿತು. ಚಾಸಾ 13 ಅವರು ನೀಡಿದ ಎಫ್ ಎಸ್ ಎಲ್ ವರದಿಯನ್ನು ನಿಪಿ. 21 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 21 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎನ್ ಟಿ ವಕೀಲರಿಂದ ಃ**

3. ಅಪಘಾತವಾದ ದಿನ ನಾನು ಕರ್ತವ್ಯದಲ್ಲಿದೆ. ಅಪಘಾತದ ಸ್ಥಳದಿಂದ ಪೋಲೀಸ್ ಠಾಣೆ ಸುಮಾರು 200 ಮೀಟರ ಅಂತರದಲ್ಲಿದೆ ಎಂದರೆ ಸರಿ. ಅಪಘಾತದ ಸುದ್ದಿ ಕೇಳಿ ನಾನು ತಕ್ಷಣ ಸ್ಥಳಕ್ಕೆ ಭೇಟಿ ಕೊಟ್ಟಿದ್ದೆ. ಭಾವ ಚಿತ್ರಗಳು ಘಟನಾ ಸ್ಥಳದಲ್ಲಿ ತೆಗೆದ ಭಾವ ಚಿತ್ರವಲ್ಲ ಎಂದರೆ ಸರಿಯಲ್ಲ. ಆ ದಿನ ಮಳೆ ಇತ್ತು ಎಂದರೆ ಸರಿ. ವಾಹನ ಬಲಕ್ಕೆ ತಿರುವು ಪಡೆದ ಬಗ್ಗೆ ಚಕ್ರಗಳ ಗುರುತುಗಳು ಭಾವ ಚಿತ್ರದಲ್ಲಿ ಕಾಣಿಸುತ್ತಿಲ್ಲ ಎಂದರೆ ಸರಿ. ಅಕ್ಷಯ ಗೋಡೌನ ಒಳಗಡೆ ಖಾಯಂ ಆಗಿ ಯಾವಾಗಲೂ ವಾಹನಗಳು ಇರುತ್ತವೆ ಎಂದರೆ ಸರಿ. ಅಪಘಾತ ಆಗದೇ ಇದ್ದರೂ ಭಾವ ಚಿತ್ರಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಬೇಕಾದಂತೆ ಕಚ್ಚಾ ನಕಾಶೆಯನ್ನು ತಯಾರಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ 6 ಪಟ್ಟಣ ಪಂಚಾಯತಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಚಾಸಾ 6 ಮೃತನ ಸಂಬಂಧಿಕರಾದ್ದರಿಂದ ನಮ್ಮ ಮೇಲೆ ಪ್ರಭಾವ ಬೀರಿ ಮೃತನ ವಾರಸುದಾರರಿಗೆ ಪರಿಹಾರ ಕೊಡಿಸುವ ಸಂಬಂಧ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಮೋಟಾರ ಸೈಕಲ ಸವಾರ ಮಳೆ ಇದ್ದ ಕಾರಣ ಸ್ವತಃ ಸ್ಕಿಡ್ಡಾಗಿ ಬಿದ್ದು ಮೃತ ಪಟ್ಟಿದ್ದಾನೆ, ಆರೋಪಿತರಿಗೂ ಹಾಗೂ ಅಪಘಾತಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ಪಂಚನಾಮೆ ಮಾಡಿಲ್ಲ, ಠಾಣೆಯಲ್ಲಿ ಕುಳಿತು ಪಂಚನಾಮೆ ತಯಾರಿಸಿ, ಪಂಚರ ಸಹಿ ಪಡೆದು ಪ್ರಕರಣಕ್ಕೆ ಅನುಕೂಲವಾಗುವಂತೆ ದಾಖಲೆಗಳನ್ನು ಪಡೆದು ಹಾಜರು ಪಡಿಸಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-
ಹಿರಿಯ ದಿವಾಣಿ ನ್ಯಾಯಾಧೀಶರು,
ಕುಂದಗೋಳ.